ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 4, September-October 2025, Pp. 21-23
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಡಾ. ಬಸವರಾಜ ಸಬರದರವರ ಕಾವ್ಯಗಳಲ್ಲಿ ದಲಿತ ಮತ್ತು ಬಂಡಾಯ ಪ್ರಜ್ಞೆ

**ಡಾ. ನಾಗೇಂದ್ರಪ್ಪ ಶಿವಶರಣಪ್ಪ**

ಉಪನ್ಯಾಸಕರು, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ಪ್ರಾದೇಶಿಕ ಕೇಂದ್ರ, ಬೀದರ್

***Abstract:***

*ಕನ್ನಡ ಸಾಹಿತ್ಯದಲ್ಲಿ ದಲಿತ ಎಂಬ ಪದ ತುಂಬಾ ಮುನ್ನೆಲೆಗೆ ಬಂದಿದ್ದು 70ರ ದಶಕದಲ್ಲಿ. 'ದಲಿತ' ಎನ್ನುವ ಪದವನ್ನು ವಿವರಿಸುವುದು ಸುಲಭವಾದ ಸಂಗತಿಯೇನಲ್ಲ. ಆ ಪದವು ತುಂಬಾ ಸಂಕೀರ್ಣವೂ, ಪರಸ್ಪರ ವಿರೋಧವು ಅನ್ನಬಹುದಾದ ಕೆಲವು ಅರ್ಥಗಳನ್ನು ತನ್ನ ಒಡಲಲ್ಲಿ ಧರಿಸಿದೆ. ಅನೇಕ ವಿದ್ವಾಂಸರು ಈ ಪದಕ್ಕೆ ಅರ್ಥ ವಿವರಣೆಯನ್ನು ನೀಡಿದ್ದಾರೆ. 'ದಲಿತ' ಪದಕ್ಕೆ ಜಾತಿಯನ್ನು ಮೂಲ ಮಾನದಂಡವಾಗಿರಿಸಿ ಕೊಂಡಿದ್ದಾರೆ. ಆದರೆ ಚಳುವಳಿಗಳು ಉಚ್ಚ್ರಾಯ ಸ್ಥಿತಿಯಲ್ಲಿರುವ ಸಂದರ್ಭದಲ್ಲಿ 'ದಲಿತ' ಎನ್ನುವ ಪದವನ್ನು ವಿಶಾಲ ನೆಲೆಯಲ್ಲಿ ನೋಡುತ್ತಿದ್ದರು. ಶೋಷಣೆಗೊಳಗಾದವರೆಲ್ಲರೂ ದಲಿತರು ಎಂಬ ಅರ್ಥದಲ್ಲಿ ಬಳುಸುತ್ತಿದ್ದರು. ಆದರೆ ಇದು ಸಮಂಜಸವಾಗುವುದಿಲ್ಲ ಯಾಕೆಂದರೆ ಮೇಲ್ವರ್ಗದಲ್ಲಿಯೂ ಕೂಡ ಶೋಷಣೆಗೆ ಒಳಗಾದವರಿದ್ದಾರೆ. ಅವರು ಯಾರು ಕೂಡ ದಲಿತ ಎಂದು ಒಪ್ಪಿಕೊಳ್ಳವುದಿಲ್ಲ. ಆದರಿಂದ ಇದೆಲ್ಲವನ್ನು ಮನಗಂಡಿರುವ ವಿದ್ವಾಂಸರು "ಶತಮಾನಗಳಿಂದ ಜನಸಮುದಾಯದಲ್ಲಿ ಆರ್ಥಿಕ, ಸಾಮಾಜಿಕ, ರಾಜಕೀಯವಾಗಿ ಮತ್ತು ಶೈಕ್ಷಣಿಕವಾಗಿ ಶೋಷಣೆಗೆ ಒಳಗಾದವರು ಒಟ್ಟು ಮನುಷ್ಯ ಸಮಾಜದೊಂದಿಗೆ ಬದುಕಲಾಗದೆ ಊರ ಹೊರಗೆ ವಾಸಿಸಿ ಕೀಳು ವೃತ್ತಿಗೆ ಅವಲಂಬಿತರಾಗಿ ಹೆಸರು ಹೇಳಿಕೊಳ್ಳಲು ನಾಚಿಕೆ ಪಡುವ ಅಸ್ಪೃಶ್ಯರು ಅಥವಾ ಬಹಿಷ್ಕೃತರೆನಿಸಿ ಕೊಂಡವರೆಲ್ಲರೂ ದಲಿತರೆನಿಸಿಕೊಳ್ಳುತ್ತಾರೆ." ಎಂದು ಸ್ಪಷ್ಟವಾಗಿ ದಲಿತ ಎಂಬ ಪದದ ವ್ಯಾಖ್ಯಾನವನ್ನು ಮಾಡಿದ್ದಾರೆ.*

***Keywords:*** *ಕನ್ನಡ ಸಾಹಿತ್ಯ, ದಲಿತ ಮತ್ತು ಬಂಡಾಯ ಸಾಹಿತ್ಯ, ಕಾವ್ಯ ಪ್ರಕಾರ, ಬಸವರಾಜ ಸಬರದ.*

## ಪೀಠಿಕೆ

ದಲಿತ ಬಂಡಾಯ ಹೋರಾಟದ ಮೂಲಕ ಕನ್ನಡ ನಾಡಿನಲ್ಲಿ ಹೆಸರುವಾಸಿಯಾಗಿರುವ ಕವಿ ಡಾ. ಬಸವರಾಜ ಸಬರದ ಇವರು ಕೊಪ್ಪಳ ಜಿಲ್ಲೆಯ ಕುಕನೂರಿಲ್ಲಿ 1954 ರಲ್ಲಿ ತಂದೆ ಬಸ್ಸಪ್ಪ ತಾಯಿ ಬಸ್ಸಮ್ಮ ದಂಪತಿಗಳ ಮಗನಾಗಿ ಜನಿಸಿದರು. ಇವರು ಪ್ರಾಥಮಿಕ ಶಿಕ್ಷಣವನ್ನು ಕುಕನೂರಿನಲ್ಲಿ ಮುಗಿಸಿದರು. ನಂತರ ಸ್ನಾತಕೋತ್ತರ ಪದವಿಯನ್ನು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಮುಗಿಸಿ ಡಾ. ಮ.ಗು.ಬಿರಾದರ ಅವರ ಮಾರ್ಗದರ್ಶನದಲ್ಲಿ 'ಬಸವೇಶ್ವರ ಮತ್ತು ಪುರಂದರದಾಸರು' ಎಂಬ ವಿಷಯದ ಮೇಲೆ ಸಂಶೋಧನಾ ಪ್ರಬಂಧವನ್ನು ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಅರ್ಪಿಸಿ ಪಿಹೆಚ್. ಡಿ ಪದವಿಯನ್ನು ಪಡೆದಿದ್ದಾರೆ.

ಡಾ ಬಸವರಾಜ ಸಬರದ ಅವರು ನಮ್ಮ ಭಾಗದ ಪ್ರಸಿದ್ದ ಬಂಡಾಯದ ಕವಿ, ನಾಟಕಕಾರ, ವಿಮರ್ಶಕ, ಸಂಪಾದಕ, ಸಂಶೋಧಕ, ವಿಚಾರಶೀಲ

***Please cite this article as:*** ನಾಗೇಂದ್ರಪ್ಪ ಶಿವಶರಣಪ್ಪ. (2025). ಡಾ. ಬಸವರಾಜ ಸಬರದರವರ ಕಾವ್ಯಗಳಲ್ಲಿ ದಲಿತ ಮತ್ತು ಬಂಡಾಯ ಪ್ರಜ್ಞೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 4(4), 21–23

ಚಿಂತಕರಾಗಿದ್ದಾರೆ. ದಲಿತ ಬಂಡಾಯದ ಹೋರಾಟಗಾರರಾಗಿದ್ದುಕೊಂಡು ಅನೇಕ ಹೋರಾಟಗಳಲ್ಲಿ ಭಾಗವಹಿಸಿದರು. ಇಡಿ ಕನ್ನಡ ನಾಡಿನಾದ್ಯಂತ ಚಿರಪರಿಚಿತರಾಗಿದ್ದಾರೆ.

ಇವರು ಬೀದರ, ಕಲಬುರಗಿ, ರಾಯಚೂರ ಅನೇಕ ಕಾಲೇಜುಗಳಲ್ಲಿ ಸೇವೆ ಸಲ್ಲಿಸಿ ನಂತರ ಗುಲಬರ್ಗಾ ವಿಶ್ವವಿದ್ಯಾಲಯ ಕಲಬುರಗಿ, ಕನ್ನಡ ಅಧ್ಯಯನ ಸಂಸ್ಥೆಯ ಮುಖ್ಯಸ್ಥರಾಗಿ, ಕಲಾನಿಕಾಯದ ಡೀನರಾಗಿ, ವಿವಿಧ ಅಧ್ಯಯನಪೀಠದ ನಿರ್ದೇಶಕರಾಗಿ ಸೇವೆಯನ್ನು ಸಲ್ಲಿಸಿ ಈಗ ನಿವೃತ್ತಿಯನ್ನು ಹೊಂದಿದ್ದಾರೆ. ಕಾವ್ಯ, ನಾಟಕ, ಸಂಶೋಧನೆ, ಸಂಪಾದನೆ, ವಿಮರ್ಶೆ ಮತ್ತು ಜೀವನ ಚರಿತ್ರೆ ಮುಂತಾದ ಕೃತಿಗಳನ್ನು ರಚಿಸಿ ಕನ್ನಡ ಸಾಹಿತ್ಯ ಲೋಕಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ. ಇವರ ಬರೆದ ಕೃತಿಗಳು ನನ್ನವರ ಹಾಡು, ಹೋರಾಟ, ಮೂಡಲಕ ಕೆಂಪು ಮೂಡ್ಯಾವ, ದನಿಯೆತ್ತಿ ಹಾಡೇನ, ಬೆಳದಿಂಗಳು ಬಿಸಿಲಾಯಿತು, ಸಬರದ ಕವಿತೆಗಳು, ಕೆಂಡಸಂಪಿಗೆ ಮುಂತಾದ ಕವನ ಸಂಕಲನಗಳನ್ನು ಮತ್ತು ಮೂರು ಬೀದಿ ನಾಟಕಗಳು, ನಾಕು ಬೀದಿ ನಾಟಕಗಳು, ಗೀತ ನಾಟಕ, ಅಸಂಗತ ನಾಟಕ ದೊಡ್ಡಾಟ ಹಲವಾರು ನಾಟಕಗಳು ಹಾಗೆಯೇ ವಿಮರ್ಶೆ, ಹೊಸದಿಕ್ಕು, ವಚನ ಚಳುವಳಿ, ಸಾಹಿತ್ಯ ಸಂಗಾತಿ, ಅನಂತಮೂರ್ತಿಯ ಕೃತಿಗಳು, ನಿರಂಜನ ಕೃತಿಗಳು, ಸಾಹಿತ್ಯ ಸಿಂಚನ, ಮುಂತಾದ ಕೃತಿಗಳು ಜೊತೆಗೆ ದಲಿತ ಸೂರ್ಯ, ಕಲ್ಯಾಣ ನಾಡಿನ ಕೆಂಪು ಕವಿತೆಗಳು, ಶರಣರ ಬಂಡಾಯದ ವಚನಗಳು, ಮುಂತಾದವುಗಳನ್ನು ರಚಿಸಿದ್ದಾರೆ. ಇವರು ಬರವಣಿಗೆ ಜೊತೆಗೆ ಅನೇಕ ಹೋರಾಟಗಳಲ್ಲಿ ಪಾಲ್ಗೊಂಡು ಅನೇಕ ಹೋರಾಟಗಳನ್ನು ಮಾಡಿದ್ದಾರೆ. ಚೆನ್ನಣ್ಣ ವಾಲಿಕಾರ ಅವರ ಜೊತೆಗೂಡಿ ಅನೇಕ ಜನಪರ ಹೋರಾಟಗಳನ್ನು ಮಾಡುವುದರ ಮೂಲಕ ಈ ನೆಲದ ಹೆಮ್ಮೆಯ ಕವಿಯಾಗಿ ನಿಂತಿದ್ದಾರೆ. ಇವರ ಸಾಹಿತ್ಯ ಸೇವೆಗೆ ಅನೇಕ ಪ್ರಶಸ್ತಿ ಪುರಸ್ಕಾರಗಳು ಸಂದಿವೆ ಇವರ ಕಾವ್ಯಗಳಲ್ಲಿ ಅವರು ದಲಿತ ದಮನಿತರ ನೋವು, ಹತಾಸೆ, ಆಕ್ರೋಶಗಳನ್ನು ಕುರಿತು ಬರೆದಿದ್ದಾರೆ. ಬಂಡಾಯ ಚಳುವಳಿಯ ಮುಂಚೂಣಿ ಹೋರಟಗಾರರಲ್ಲಿ ಇವರು ಒಬ್ಬರು. ಇವರ ಕಾಲಕ್ಕೆ ಅನೇಕ ಸವಾಲುಗಳನ್ನು ತನ್ನದೆ ಆದ ನೆಲೆಗಳಲ್ಲಿ ಎದುರಿಸುತ್ತಾ ಬಂದಿದೆ. ಬಂಡಾಯ ಒಂದು ಸಾಮಾಜಿಕ ಕಳಕಳಿಯ ಚಳುವಳಿಯಾಗಿದ್ದರಿಂದ ಇಲ್ಲಿ ಆಕ್ರೋಶವೆ ಹೆಚ್ಚಾಗಿ ಕಾಣಿಸುತ್ತದೆ. ಇವರ ಮೊದಲ ಕವನ ಸಂಕಲನದ ಹೆಸರೆ ಸೂಚಿಸುವ ಹಾಗೆ 'ಹೋರಾಟ' ಇದರಲ್ಲಿ ವರ್ಗ ಪ್ರಜ್ಞೇ ದಟ್ಟವಾಗಿ ಮೂಡಿಬಂದಿದೆ.

ಡಾ. ಬಸವರಾಜ ಸಬರದ ಅವರು ಶತ ಶತಮಾನಗಳಿಂದ ವೇದಶಾಸ್ತ್ರ ಆಗಮಗಳ ಜನರನ್ನು ಹೇಗೆ ಮೂಲೆಗುಂಪಾಗಿ ಮಾಡಿದ್ದವು ಎಂಬುದನ್ನು ಹೇಳುವುದರ ಜೊತೆಗೆ ಅವೆಲ್ಲವನ್ನು ಧಿಕ್ಕರಿಸಿ ಸಮಸಮಾನತೆಯನ್ನು ಸಾರುವಂತಹ ಸಂವಿಧಾನ ನಮಗೆ ಬಂದಿದೆ. ಅದರಡಿಯಲ್ಲಿ ಎಲ್ಲರೂ ಸಮಾನರಾಗಿದ್ದೇವೆ ಎಂಬುದನ್ನು ಹೇಳುತ್ತಾರೆ.

ಮೊನ್ನೆ
ಅಯ್ಯೋಧ್ಯೆಯಲ್ಲು ಮಸೀದಿ ಕೆಡವಿ
ಮಂದಿರ ಕಟ್ಟಲು ಹೊರಟವರನ್ನು ನೋಡಿ
ಮಗು ಕೇಳುತ್ತದೆ
ಅಪ್ಪಾ ದೇವರಿಗೂ
ಚಳಿ ಆಗುತ್ತದೆಯೇ?
ನಿನ್ನೆ
ಶ್ರವಣ ಬೆಳಗೊಳದಲ್ಲಿ
ಮಹಾಭಿಷೇಕವಾದ ನಂತರ
ಮಗು ಕೇಳುತ್ತದೆ
ಅಪ್ಪಾ ಗೊಮ್ಮಟನಿಗೆ
ಚಡ್ಡಿ ಇಲ್ಲವೇಕೆ?
ಇಂದು ನಗರದ ನಡು ಮಂದಿರದಲ್ಲಿ

ಬಾಂಬು ಸ್ಫೋಟಗೊಂಡಾಗ

ಮಗು ಕೇಳುತ್ತದೆ

ಅಪ್ಪ ದೇವರನ್ನು

ಯಾರು ಕೊಂದರು_23

ಬಂಡಾಯದ ಕವಿ ಸಬರದ ಅವರು ಈ ಕವಿತೆಯಲ್ಲಿ ಮೂರು ಪ್ರಶ್ನೆಗಳನ್ನೆತ್ತುತ್ತಾರೆ. ರಾಮಮಂದಿರ ಕೆಡವಿದ್ದು ಬಾಹುಬಲಿಯ ಮಸ್ತಕಾಭೀಷೇಕ ಮತ್ತು ಬಾಂಬು ಸ್ಫೋಟ, ಇವುಗಳನ್ನಿಟ್ಟುಕೊಂಡು ಸಮಾಜದ ತಲ್ಲಣಗಳನ್ನು ಚರ್ಚಿಸಿದ್ದಾರೆ. ಮಸೀದಿಯನ್ನು ಕೆಡವಿ ಮಂದಿರಗಳು ಕಟ್ಟುತ್ತಾರೆ ಅನೇಕ ಜನರು ಇನ್ನೂ ಬೀದಿಯಲ್ಲಿ ಇರಲು ಸೂರಿಲ್ಲದೆ ಚಳಿಗೆ ನಡುಗುತ್ತಿದ್ದಾರೆ. ಅವರ ಸ್ಥಿತಿ ಹೇಗೆ ಎಂದು ಹಾಗೆಯೇ ಬಾಹುಬಲಿಯ ಚಿತ್ರವನ್ನು ನೋಡಿದರೆ ಅನೇಕ ಬಾಹುಬಲಿಗಳು ಚಡ್ಡಿಯಿಲ್ಲದೆ ಬೀದಿ ಬೀದಿಯಲ್ಲಿ ಅಲೆಯುತ್ತಿದ್ದಾರೆ ಅವರಿಗೆ ಚಡ್ಡಿ ತರುವವರು ಯಾರು. ಬಾಂಬುಗಳನ್ನು ಹಾಕಿ ಜನತೆಯನ್ನು ನಾಶಮಾಡವ ಉಗ್ರರಿಗೆ ಶಿಕ್ಷೆ ಕೊಡುವವರು ಯಾರು ಎಂಬ ಮಹತ್ವದ ಪ್ರಶ್ನೆಗಳು ಇಲ್ಲಿವೆ.

**ಪರಾಮರ್ಶನ ಗ್ರಂಥಗಳು**


- ಬಸವರಾಜ ಸಬರದ. *ಸಬರದ ಕವಿತೆಗಳು.*
- ಶೇಷಗಿರಿರಾವ್ ಎಲ್ ಎಸ್. *ಹೊಸಗನ್ನಡ ಸಾಹಿತ್ಯಾವಲೋಕನ*
- ಶ್ರೀನಿವಾಸ ಹಾವನೂರ. *ಹೊಸಗನ್ನಡದ ಅರುಣೋದಯ.*
- ಸಿದ್ಧಲಿಂಗಯ್ಯ. *ಸಮಗ್ರ ಸಾಹಿತ್ಯ ಸಂಪುಟ–1*